# ಕೃಷಿಗಣತಿ, ಮಳೆವರದಿ, ಗಣಕಯಂತ್ರ ವಿಭಾಗ (ಎಆರ್‌ಸಿ).

- ಕೃಷಿಗಣತಿ.
- ಮಳೆವರದಿ ವಿಶ್ಲೇಷಣೆ.
- ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಾದ
  ಮಾದರಿ ಸಮೀಕ್ಷೆ.

ಕೃಷಿಗಣತಿ

- ಕೃಷಿಗಣತಿಯನ್ನು 5 ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರದ ನಿರ್ದೇಶನದ ಅನುಸಾರ ರಾಜ್ಯದಾದ್ಯಂತ ನಡೆಸಲಾಗುವುದು, ಗಣತಿಯ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರವು ಒದಗಿಸುತ್ತಿದೆ. 1971 ರಿಂದ 2010-11ರ ವರೆಗೆ 9 ಕೃಷಿಗಣತಿಗಳು ಮುಗಿದಿದ್ದು, ಪ್ರಸ್ತುತ 10ನೇ ಕೃಷಿಗಣತಿ 2015-16ರ ವರದಿ ತಯಾರಿಕೆ ಪ್ರಗತಿಯಲ್ಲಿರುತ್ತದೆ.

ಉದ್ದೇಶ:

- ಈ ಗಣತಿಯಲ್ಲಿ ಕೃಷಿ ಹಿಡುವಳಿಗಳ ವರ್ಗಾಂತರಕ್ಕೆ (ಅತಿ ಸಣ್ಣ, ಸಣ್ಣ, ಅರೆಮಧ್ಯಮ, ಮಧ್ಯಮ ಮತ್ತು ದೊಡ್ಡ ಹಿಡುವಳಿಗಳ) ಅನುಸಾರವಾಗಿ ಹಿಡುವಳಿದಾರರ ಸಂಖ್ಯೆ, ವಿಸ್ತೀರ್ಣ, ಭೂ ಉಪಯೋಗ, ನೀರಾವರಿಯಾದ ಕ್ಷೇತ್ರ, ವಿವಿಧ ಬೆಳೆಗಳ ವಿಸ್ತೀರ್ಣ, ಕೃಷಿಗೆ ಬಳಸುವ ರಾಸಾಯನಿಕ ಗೊಬ್ಬರ, ಕೃಷಿ ಉಪಕರಣಗಳ ಬಳಕೆ, ಸಾಲಕ್ಕೆ ಸಂಬಂದಿಸಿದ ಮಾಹಿತಿಯನ್ನು ಸಂಗ್ರಹಿಸುವುದರಿಂದ ಕೃಷಿ ಅಭಿವೃದ್ಧಿ ಯೋಜನೆ ರೂಪಿಸುವಲ್ಲಿ ಅಮೂಲ್ಯ ಮಾಹಿತಿಗಳನ್ನು ಒದಗಿಸುತ್ತದೆ.

ಗಣತಿಯು ಮೂರು ಹಂತದಲ್ಲಿ ನಡೆಯುತ್ತದೆ.

- ಮೊದಲನೆ ಹಂತ: ರಾಜ್ಯದಲ್ಲಿರುವ ಎಲ್ಲಾ ಕೃಷಿ ಹಿಡುವಳಿದಾರರ ಸಂಖ್ಯಾ ಮಾಹಿತಿ ಹಾಗೂ ಹಿಡುವಳಿ ಪ್ರದೇಶದ ವಿವರಗಳನ್ನು ವಿವಿಧ ಸಾಮಾಜಿಕ ಗುಂಪುವಾರು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮತ್ತು ಇತರೆ) ಹಾಗೂ ವಿವಿಧ ವರ್ಗಾಂತರಗಳ (ಅತಿ ಸಣ್ಣ, ಸಣ್ಣ, ಅರೆ ಮದ್ಯಮ, ಮದ್ಯಮ ಹಾಗೂ ದೊಡ್ಡ ಹಿಡುವಳಿದಾರರ) ಅನುಸಾರವಾಗಿ ಮಾಹಿತಿಯನ್ನು ಪಹಣಿ ಪತ್ರಿಕೆಯಿಂದ ಸಂಗ್ರಹಿಸಲಾಗುವುದು

- <u>ಎರಡನೇ ಹಂತ:</u> ರಾಜ್ಯದ ಒಟ್ಟು ಗ್ರಾಮಗಳ ಶೇಕಡ 20 ರಷ್ಟು ಗ್ರಾಮಗಳಲ್ಲಿ ಅಂದರೆ ಸಕಾಲಿಕ ವರದಿ ಯೋಜನೆಯಲ್ಲಿ ಆಯ್ಕೆಯಾದ ಎಲ್ಲಾ ಗ್ರಾಮಗಳಲ್ಲಿ ಭೂಬಳಕೆ ವಿವರಗಳು, ನೀರಾವರಿಯಾದ ಕ್ಷೇತ್ರ ಮತ್ತು ವಿವಿಧ ಬೆಳೆಗಳ ವಿಸ್ತೀರ್ಣದ ಮಾಹಿತಿಯನ್ನು ಎರಡನೇ ಹಂತದಲ್ಲಿ (ಭಾಗ-2 ರಲ್ಲಿ) ಸಂಗ್ರಹಿಸಲಾಗುವುದು.

- <u>ಮೂರನೇ ಹಂತ:</u> ಇನ್‌ಪುಟ್ ಸಮೀಕ್ಷೆ (ಪರಿಕರಗಳ ಸಮೀಕ್ಷೆ)ಯನ್ನು ಕೃಷಿಗಣತಿಯ ಅನುಸರಣಾ ಸಮೀಕ್ಷೆಯಾಗಿ ಕೈಗೊಳ್ಳಲಾಗುತ್ತದೆ. ಇದರಲ್ಲಿ ಹಿಡುವಳಿದಾರರ ವರ್ಗಾಂತರಕ್ಕನುಗುಣವಾಗಿ, ಸಾಗುವಳಿದಾರರು ಬಳಸುವ ಪರಿಕರಗಳಾದಂತಹ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳು, ಸಾವಯವ ಮತ್ತು ಹಸಿರು ಗೊಬ್ಬರಗಳು, ಕೀಟನಾಶಕಗಳು, ಕೃಷಿ ಉಪಕರಣಗಳ ಬಳಕೆ ಹಾಗೂ ಸಾಗುವಳಿದಾರರು ಪಡೆದ ಕೃಷಿ ಸಾಲಗಳ ವಿವರ ಮುಂತಾದ ಮಾಹಿತಿಯು ಒಳಗೊಂಡಿರುತ್ತದೆ. ಒಟ್ಟು ಗ್ರಾಮಗಳ ಶೇಕಡ 7 ರಷ್ಟು ಗ್ರಾಮಗಳನ್ನು ಅನಿಯಮಿತವಾಗಿ (ಸಕಾಲಿಕ ವರದಿ ಯೋಜನೆಯಡಿಯಲ್ಲಿ ಆಯ್ಕೆ ಆಗಿರುವ) ಆಯ್ಕೆ ಮಾಡಿ ಸಾಗುವಳಿ ಹಿಡುವಳಿದಾರರನ್ನು ಸಂಪರ್ಕಿಸಿ ಈ ಸಮೀಕ್ಷೆಗೆ ಮಾಹಿತಿ ಸಂಗ್ರಹಿಸಲಾಗುವುದು

# 10ನೇ ಕೃಷಿಗಣತಿ 2015-16 ರ ಪ್ರಕಾರ ಹಿಡುವಳಿದಾರರ ಸಂಖ್ಯೆ ಮತ್ತು ಭೂ ವಿಸ್ತೀರ್ಣ

| ವರ್ಗಾಂತರ | ಹಿಡುವಳಿದಾರರ ಸಂಖ್ಯೆ (ಲಕ್ಷಗಳಲ್ಲಿ) | | | ಹಿಡುವಳಿಯಾದ ಭೂ ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ) | | | ಸರಾಸರಿ ಹಿಡುವಳಿದಾರರು (ಹೆಕ್ಟೇರ್‌ಗಳಲ್ಲಿ) | | |
|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು * | ಗಂಡು | ಹೆಣ್ಣು | ಒಟ್ಟು * | ಗಂಡು | ಹೆಣ್ಣು | ಒಟ್ಟು * |
| **ಅತಿ ಸಣ್ಣ (< 1 .ಹೇಕ್ಟರ್ )** | **37.21** | **10.37** | **47.67** | **16.28** | **4.48** | **20.80** | **0.44** | **0.43** | **0.44** |
| **ಸಣ್ಣ (1-2 ಹೇಕ್ಟರ್)** | **17.89** | **4.21** | **22.14** | **25.14** | **5.88** | **31.07** | **1.40** | **1.40** | **1.40** |
| **ಅರೆ ಮದ್ಯಮ (2-4 ಹೇಕ್ಟರ್)** | **9.84** | **2.06** | **11.93** | **26.35** | **5.46** | **31.88** | **2.68** | **2.65** | **2.67** |
| **ಮದ್ಯಮ (4-10 ಹೇಕ್ಟರ್)** | **3.79** | **0.71** | **4.51** | **21.59** | **3.98** | **25.69** | **5.69** | **5.66** | **5.69** |
| **ದೊಡ್ಡ (>= 10 ಹೇಕ್ಟರ್ )** | **0.46** | **0.08** | **0.56** | **6.76** | **1.22** | **8.61** | **14.66** | **14.89** | **15.45** |
| ಒಟ್ಟು | **69.19** | **17.43** | **86.81** | **96.12** | **21.02** | **118.05** | **1.39** | **1.21** | **1.36** |

| ಸಾಮಾಜಿಕ ಪಂಗಡ | ಹಿಡುವಳಿದಾರರ ಸಂಖ್ಯೆ (ಲಕ್ಷಗಳಲ್ಲಿ) | | | ಹಿಡುವಳಿಯಾದ ಭೂ ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ) | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು * | ಗಂಡು | ಹೆಣ್ಣು | ಒಟ್ಟು * |
| **ಪರಿಶಿಷ್ಟ ಜಾತಿ** | **7.69** | **2.04** | **9.73** | **8.90** | **2.18** | **11.08** |
| **ಪರಿಶಿಷ್ಟ ಪಂಗಡ** | **4.14** | **1.07** | **5.21** | **5.89** | **1.40** | **7.30** |

ಟಿಪ್ಪಣಿ: * ಒಟ್ಟು ಹಿಡುವಳಿಗಳ ಸಂಖ್ಯೆಮತ್ತು ವಿಸ್ತೀಣದಲ್ಲಿ ಸಂಘ ಸಂಸ್ಥೆಗಳ ಮಾಹಿತಿಯು ಸೇರಿರುತ್ತದೆ.

# ಮಳೆ ಅಂಕಿ ಅಂಶಗಳು

- ದಿನಂ ಪ್ರತಿ ಮತ್ತು ಮಾಸಿಕವಾರು ತಾಲ್ಲೂಕು ಕೇಂದ್ರಗಳ ಮಳೆ ಮಾಹಿತಿಯನ್ನು ಮುಂಗಾರು ಋತುವಿನಲ್ಲಿ ಸಂಗ್ರಹಿಸಿ ವರದಿ ತಯಾರಿಸಲಾಗುವುದು. (ಜೂನ್ 1ರಿಂದ ಡಿಸೆಂಬರ್ 31ರ ವರೆಗೆ)

- ಮಳೆ ಮಾಹಿತಿಯನ್ನು ಮಳೆ ಸಂಗ್ರಹಣಕಾರರಿಂದ ತಾಲ್ಲೂಕು ಕೇಂದ್ರಗಳಲ್ಲಿ ಸಂಗ್ರಹಿಸಲಾಗುತ್ತದೆ. ಸದರಿ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಮುಖಾಂತರ ಕೇಂದ್ರ ಕಛೇರಿಗೆ ರವಾನಿಸಲಾಗುತ್ತದೆ.

- ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಳೆ ಮಾಪನ ಕೇಂದ್ರಗಳ ಮಳೆ ಮಾಹಿತಿಯನ್ನು ಸಂಗ್ರಹಿಸಿ ವಾರ್ಷಿಕ ಮಳೆ ವರದಿಯನ್ನು ತಯಾರಿಸಲಾಗುವುದು.(ಜನವರಿಯಿಂದ ಡಿಸೆಂಬರ್ ವರೆಗೆ)

- ರಾಜ್ಯದ 176 ತಾಲ್ಲೂಕುಗಳಲ್ಲಿ 1298 ಮಳೆ ಮಾಪನ ಕೇಂದ್ರಗಳಿದ್ದು, ಈ ಪೈಕಿ 1163 ಮಳೆ ಮಾಪನ ಕೇಂದ್ರಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.

- ಮಳೆ ಮಾಹಿತಿಯು 1890ನೇ ವರ್ಷದಿಂದಲೂ ಸಹ ಲಭ್ಯವಿರುತ್ತದೆ.

# ಅಭಿವೃದ್ಧಿ ಕಾರ್ಯಕ್ರಮಗಳ ಮೇಲಿನ ಮಾದರಿ ಸಮೀಕ್ಷೆ

ಇಲ್ಲಿಯವರೆವಿಗೂ 17 ಸುತ್ತುಗಳಲ್ಲಿ  ಮಾದರಿ ಸಮೀಕ್ಷೆಗಳನ್ನು ಕೈಗೊಳ್ಳಲಾಗಿದೆ. 2018-19 ನೇ ಸಾಲಿನಲ್ಲಿ 18ನೇ ಸುತ್ತಿನ ಮಾದರಿ ಸಮೀಕ್ಷೆಯನ್ನು ಈ ಕೆಳಕಂಡ ಯೋಜನೆಗಳ ಮೇಲೆ ಕೈಗೊಳ್ಳಲಾಗಿದ್ದು ವರದಿಯನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಹಾಗೂ ಅನುಷ್ಠಾನಕ್ಕಾಗಿ ಕಳುಹಿಸಿಕೊಡಲಾಗಿದೆ.

| ಕ್ರಮ ಸಂಖ್ಯೆ | ಯೋಜನೆ | ಇಲಾಖೆ |
|---|---|---|
| 1 | 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ ಯೋಜನೆ | ಸಾರ್ವಜನಿಕ ಶಿಕ್ಷಣ ಇಲಾಖೆ |
| 2 | ಪಶುಭಾಗ್ಯ ಯೋಜನೆ | ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ |
| 3 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ |
| 4 | ಅಂಗವಿಕಲರ ಮಾಸಾಶನ ಯೋಜನೆ | ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ |

# ಅಭಿವೃದ್ಧಿ ಕಾರ್ಯಕ್ರಮಗಳ ಮೇಲಿನ ಮಾದರಿ ಸಮೀಕ್ಷೆ

ಇಲ್ಲಿಯವರೆವಿಗೂ **18** ಸುತ್ತುಗಳಲ್ಲಿ ಮಾದರಿ ಸಮೀಕ್ಷೆಗಳನ್ನು ಕೈಗೊಳ್ಳಲಾಗಿದೆ. **2019-20**ನೇ ಸಾ   ನಲ್ಲಿ **19**ನೇ ಸುತ್ತಿನ ಮಾದರಿ ಸಮೀಕ್ಷೆಯನ್ನು ಈ ಕೆಳಕಂಡ ಯೋಜನೆಗಳ ಮೇಲೆ ಕೈಗೊಳ್ಳಲು ಸರ್ಕಾರದಿಂದ  ವರದಿಯನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ಹಾಗೂ ಅನುಷ್ಠಾನಕ್ಕಾಗಿ ಕಳುಹಿಸಿಕೊಡಲಾಗಿದೆ.

| ಕ್ರಮ ಸಂಖ್ಯೆ | ಯೋಜನೆ | ಇಲಾಖೆ |
|---|---|---|
| 1 | ಮನಸ್ವಿನಿ ಯೋಜನೆ | ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ |
| 2 | ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 3 | ಹನಿ ನೀರಾವರಿ ಯೋಜನೆ | ತೋಟಗಾರಿಕೆ ಇಲಾಖೆ |
| 4 | ಹಾಲು ಉತ್ಪಾದಕರಿಗೆ ಉತ್ತೇಜನ | ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ |
| 5 | ಕೃಷಿ ಯಂತ್ರಧಾರೆ-ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು | ಕೃಷಿ ಇಲಾಖೆ |